





ಗಣತಿಯ ನಾಲ್ಕನೇ ದಿನದಿಂದ ಟ್ರಾನ್ಸೆಕ್ಟ್ ಲೈನ್ ಮಾಡಿ ಅಲ್ಲಿಂದ ಎರಡೂ ಬದಿಯಲ್ಲಿ ಕಂಡುಬರುವ ಸಸ್ಯಾಹಾರಿ ಪ್ರಾಣಿಗಳ ಮಾಹಿತಿಗಳನ್ನು ದಾಖಲಿಸಲಾಯಿತು. ಇಲ್ಲಿ ಲೈನ್‌ಗಳಿಗಾಗಿ ಸಸ್ಯಗಳ ವೈವಿಧ್ಯವಿರುವ ಜಾಗವನ್ನು ಆಯ್ದುಕೊಳ್ಳಲಾಗಿತ್ತು. 400 ಮೀಟರ್‌ಗೊಮ್ಮೆ ಸಸ್ಯ ಸಂಪತ್ತಿನ ವೈವಿಧ್ಯವನ್ನು ದಾಖಲಿಸಲಾಯಿತು. ಹಾಗೆಯೇ ಅಲ್ಲಿ ಕಂಡು ಬಂದ ಮಾನವನ ಹಸ್ತಕ್ಷೇಪ, ಸಾಕು ಪ್ರಾಣಿಗಳ ಅತಿಕ್ರಮಣವೂ ದಾಖಲಾಯಿತು.

ಪ್ರಾಣಿಗಳ ಹಿಕ್ಕೆಗಳ ಸಂಗ್ರಹಿಸಿ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಇದರಿಂದ ಆ ಪ್ರಾಣಿಗಳ ಡಿಎನ್‌ಎ, ಅದು ತಿಂದ ಪ್ರಾಣಿ, ಅವುಗಳ ಸಾಂದ್ರತೆ, ಅವಲಂಬನೆಯೂ ತಿಳಿಯುತ್ತದೆ. ಹೀಗೆ ವೈಜ್ಞಾನಿಕ ತಳಹದಿಯ ಈ ಬಾರಿಯ ಗಣತಿಯಲ್ಲಿ ಬಂಡೀಪುರದಲ್ಲಿ 60 ಸ್ವಯಂಸೇವಕರು ಇಲಾಖೆಯವರ ಜತೆ ಕೈಜೋಡಿಸಿ ಗಣತಿಯಲ್ಲಿ ನೆರವಾದರು.

ಈ ಗಣತಿಯ ಆರು ದಿನಗಳ ಅವಧಿಯಲ್ಲಿ ಬಂಡೀಪುರದಲ್ಲಿ 18 ಹುಲಿಗಳು, 224 ಆನೆಗಳು, 8 ಚಿರತೆಗಳು, 5 ಕರಡಿಗಳು, 63 ಕಾಡುನಾಯಿಗಳು, 56 ಕಾಡೆಮ್ಮೆಗಳು, 15 ಜಿಂಕೆಗಳ ಗುಂಪು ಮತ್ತು 19 ಕಾಡು ಕುರಿಗಳು ಕಂಡುಬಂದವು.

ಹುಲಿ ಗಣತಿಯಲ್ಲಿ ಕಂಡುಬಂದ ಕೆಲವು ವಿಶಿಷ್ಟ ಅಂಶಗಳನ್ನು ನಿರ್ಲಕ್ಷಿಸುವಂತಿಲ್ಲ. ಆದರೆ ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಕಾಡಂಚಿನ ಮಾನವ ಗ್ರಾಮಗಳ ನಡುವಿನ ಕಂದಕ ಸಾಕಷ್ಟು ದೊಡ್ಡದಿರುವುದು ಈ ಗಣತಿಯಲ್ಲಿ ಗೊತ್ತಾಯಿತು. ಅರಣ್ಯ ಸಿಬ್ಬಂದಿ ಮತ್ತು ಕಾಡಂಚಿನ ಗ್ರಾಮಸ್ಥರ ನಡುವೆ ಮನಸ್ಸುಗಳನ್ನು ಬೆಸೆಯುವ ಕೆಲಸ ಆಗಬೇಕಿದೆ. ಹಾಗೆಯೇ ಮಾನವ– ವನ್ಯಜೀವಿ ಸಂಘರ್ಷವನ್ನು ಕೊನೆಗೊಳಿಸಲು ಹೊಸ ಹಾದಿಗಳನ್ನು ಹುಡುಕಬೇಕಿದೆ. ಸಂಪರ್ಕ ಸಭೆಗಳು ನಿರಂತರವಾಗಿ ನಡೆಯಬೇಕಿದೆ.

ಕಳೆದ ವರ್ಷ ಒಟ್ಟು 12 ಹುಲಿಗಳು ಮರಣ ಹೊಂದಿದ್ದು ನೆನಪಿದೆ. ಅದರಲ್ಲಿ 4 ಅಸಹಜ ಸಾವು ಎನ್ನುವುದು ಆತಂಕ ಕಾರಿ ಸಂಗತಿಯೇ. ಎರಡು ಚಿರತೆಗಳನ್ನು ವಿಷಹಾಕಿ ಕೊಲ್ಲಲಾಗಿತ್ತು. ಅದರಲ್ಲೊಂದು ಅಪರೂಪದ ಕಪ್ಪುಚಿರತೆ. ಹಾಗೆಯೇ ಮಾಂಸಾಹಾರಿ ಪ್ರಾಣಿಗಳು ಊರಿಗೆ ಬಂದಾಗ ಸೆರೆ ಹಿಡಿಯಲು ಬಳಸುವ ಸಾಂಪ್ರದಾಯಿಕ ಕಬ್ಬಿಣದ ಬೋನು ಪ್ರಾಣಿಗಳಿಗೆ ಮಾರಣಾಂತಿಕ ಗಾಯ ಮಾಡುವುದು ಕಂಡುಬಂತು. ಫೈಬರ್‌ಬೋನಿನ ತುರ್ತು ಅವಶ್ಯಕತೆಯನ್ನು ಇದು ಒತ್ತಿಹೇಳುತ್ತದೆ. ಈ ಹಿನ್ನೆಲೆಯಲ್ಲಿ ಹುಲಿಗಣತಿ ಯಾವುದಾರೂ ಬೆಳ್ಳಿರೇಖೆಯನ್ನು ತೋರುತ್ತದೋ? ಸಂಪೂರ್ಣ ಮಾಹಿತಿ ಕಲೆಹಾಕಿದ ನಂತರ ಅರಣ್ಯ ಇಲಾಖೆಯೇ ಇದಕ್ಕೆ ಉತ್ತರ ನೀಡಬಹುದು.

ಆರು ದಿನಗಳ ಹುಲಿಗಣತಿ ಯಶಸ್ವಿಯೇನೋ ಆಯಿತು. ಹುಲಿಗಳ ಕುರಿತು ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕಲಾಯಿತು. ಆದರೆ ಹುಲಿಯ ಮುಖದಲ್ಲಿ ನೆಮ್ಮದಿ ಕಾಣಿಸಿತೆ? ಹುಲಿಗಳ ಆತಂಕ, ಅವುಗಳ ಮನಃಸ್ಥಿತಿಯನ್ನು ಅರಿಯುವ ಪ್ರಯತ್ನಗಳು ನಡೆದವೆ? ಮಾಹಿತಿದಾರರು, ಸ್ವಯಂಸೇವಕರು ಕಾಡಿನ ಅಗಾಧ ಸೌಂದರ್ಯವನ್ನು ಆಹ್ಲಾದಿಸಿದರು. ಆದರೆ ಹುಲಿಯನ್ನು ಕಾಡುವ ನೋವುಗಳ ಬಗ್ಗೆ ಅರ್ಥವಾದಂತಿಲ್ಲ. ಹುಲಿಯ ಗಣತಿ ಕಾರ್ಯ ಮುಗಿದರೂ ಅವುಗಳ ಮನಸ್ಸಿನಲ್ಲಿರುವ ಗಣಿತವನ್ನು ಲೆಕ್ಕ ಹಾಕುವುದು ಕಷ್ಟ.